## ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು

ವಿಷಯ:- ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 01 ಅನುದಾನಿತ ಪಾಲಿಟೆಕ್ನಿಕ್‌ಗಳ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 2024-25 ನೇ ಸಾಲಿನಲ್ಲಿನ ಸೆಪ್ಟೆಂಬರ್ -'2024 ರ ಮಾಹೆಯ ಸರ್ಕಾರದ ಪಾಲಿನ ಸಹಾಯಾನುದಾನ (ವೇತನ) ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಹೆಚ್‌ಪಿಟಿ 2024, ದಿನಾಂಕ:04.04.2024.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಖಜಾನೆ-2), ಆರ್ಥಿಕ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಖ2 /ಪಿ.ಎಂ.ಯು /92 /2015-16 (7), ದಿನಾಂಕ: 24-10-2019.

**ಪ್ರಸ್ತಾವನೆ:**

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ 2024-25 ನೇ ಸಾಲಿನ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದಿಸಿ, ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಸ್ತುತ ಖಾಜಾನೆಗಳಲ್ಲಿ ಪಾವತಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳ ಸಹಾಯಾನುದಾನ ವೇತನ ಬಿಲ್ಲುಗಳನ್ನು (Grant in Aid Pay Bills of Private Educational Institution) ಅಕ್ಟೋಬರ್-2019 ರ ಮಾಹೆಯಿಂದ ವೇತನವನ್ನು ಖಜಾನೆ-2 ರಲ್ಲಿ ಪಾವತಿಸಲು ತಿಳಿಸಲಾಗಿದೆ.

ಕೇಂದ್ರ ಕಛೇರಿಯ ಹೆಚ್.ಆರ್.ಎಂ.ಎಸ್ ವಿಭಾಗದವರು ಕಡತ ಸಂ: **DTE-ADMI/4/2024-JD-DEPT TECH EDUCATION (E: 1312638)** ರಲ್ಲಿ **01** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **40** ಬೋಧಕ/ಬೋಧಕೇತರ ಸಿಬ್ಬಂದಿಗಳ ಸೆಪ್ಟೆಂಬರ್-'2024ರ ಮಾಹೆಯ ಸಹಾಯಾನುದಾನ (ವೇತನ) **ರೂ.63,56,785/-** ಗಳನ್ನು ಖಜಾನೆ-2 ತಂತ್ರಾಂಶದ ನಮೂನೆಯನ್ನು ಸಲ್ಲಿಸಿರುತ್ತಾರೆ. ಆದುದರಿಂದ **01** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **44** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ **ಸೆಪ್ಟೆಂಬರ್** -'2024ರ ಮಾಹೆಯ ವೇತನ ಬಿಡುಗಡೆ ಮಾಡಬಹುದಾಗಿದೆ.

2024-25 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ **01** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು **44** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ **ಸೆಪ್ಟೆಂಬರ್ -'2024ರ** ಮಾಹೆಯ ಸರ್ಕಾರದ ಸಹಾಯಾನುದಾನ (ವೇತನ) **ರೂ.63,56,785/-** ಗಳನ್ನು 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**ಕಛೇರಿ ಆದೇಶ ಸಂ: ಡಿಟಿಇ 02 ಜಿಆರ್‌ಟಿ (2) 2024, ಬೆಂಗಳೂರು, ದಿನಾಂಕ: 19-11-2024.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **01** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು **44** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ **ಸೆಪ್ಟೆಂಬರ್-'2024ರ** ಮಾಹೆಗೆ ಸರ್ಕಾರದ ಪಾಲಿನ ಶೇ.100 ರಷ್ಟು ಸಹಾಯಾನುದಾನ (ವೇತನ) **ರೂ.63,56,785/- (ರೂಪಾಯಿ ಅರವತ್ತ ಮೂರು ಲಕ್ಷ ಐವತ್ತಾರು ಸಾವಿರದ ಏಳು ನೂರು ಎಂಬತ್ತೈದು)** ಮಾತ್ರಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಬಿಡುಗಡೆ ಮಾಡಿ ಆದೇಶಿಸಿದ್ದು, ಸದರಿ ಖರ್ಚನ್ನು ಲೆಕ್ಕ ಶೀರ್ಷಿಕೆ 2203-00-104-0-01-101 ರಡಿಯಲ್ಲಿ ಭರಿಸಲು ಕೂಡ ಆದೇಶಿಸಲಾಗಿದೆ.

| SL No. | Name of the Polytechnic | EST NO. | GROSS SALARY | DEDUCTIONS | NET SALARY | HRMS Bill NO. | No.of Employees |
|---|---|---|---|---|---|---|---|
| 1 | TIPPU SHAHEED INSTITUTE OF TECHNOLOGY, HUBLI | 14 | 6356785 | 1581888 | 4774897 | HG2410070139 | 44 |
| | | | | | | | 44 |
| | TOTAL | | 6356785 | 1581888 | 4774897 | | |

ಈಗ ಬಿಡುಗಡೆ ಮಾಡಿರುವ **ಸೆಪ್ಟೆಂಬರ್ -'2024** ರ ಮಾಹೆಯ ಸರ್ಕಾರದ ಪಾಲಿನ ವೇತನಾನುದಾನ ಒಟ್ಟು ಸಹಾಯಾನುದಾನ ವೇತನ **ರೂ.63,56,785/- (ರೂಪಾಯಿ ಅರವತ್ತ ಮೂರು ಲಕ್ಷ ಐವತ್ತಾರು ಸಾವಿರದ ಏಳು ನೂರು ಎಂಬತ್ತೈದು)** ಮಾತ್ರಗಳನ್ನು ಸಿ.ಟಿ.ಎಸ್ 13 ಮೂಲಕ ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಮಾನ್ಯ ಉಚ್ಚನ್ಯಾಯಲಯ, ಧಾರವಾಡ ಬೆಂಚ್‌ನ, ಧಾರವಾಡ (1) W.P No. 110254/2019 & 110271/2019 -ಶ್ರೀ. ಕಿಶೋರ್ ರೇವಣಕರ್ ಮತ್ತು ಇತರರು ಆದೇಶ ದಿನಾಂಕ 04-06-2019 (2) W.P ಓ.o. 110242/2019 & 110243/2019 - ಶ್ರೀ. ಸಲೀಮ್ ಅಬ್ಬಿಗೇರಿ ಮತ್ತು ಇತರರ ಆದೇಶ ದಿನಾಂಕ 18-06-2019 (3) ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು W.P No. 18442-18484/2019- ಶ್ರೀ. ನಾಗರಾಜರಾವ್ ವೈ.ಕೆ ಮತ್ತು ಇತರರ ಆದೇಶ ದಿನಾಂಕ 25-04-2019 ಹಾಗೂ (4) W.P No. 19104-19303/2019 & 19705-19721/2019 ಉ್ಪ ಆದೇಶ ದಿನಾಂಕ 26-04-2019 ರ ಮಧ್ಯಂತರ ಆದೇಶದನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
2. ಉಚ್ಚನ್ಯಾಯಲಯ, ಧಾರವಾಡ ಬೆಂಚ್‌ನ W.A No. 2476/2015; 2467/2015; 3600-4195/2015 c/wW.A No. 2467/2015 & 2714-3455/2015 ದಿನಾಂಕ 27-11-2015 ನ ತೀರ್ಪಿನನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
3. ಮಾನ್ಯ ಉಚ್ಚನ್ಯಾಯಾಲಯ, ಧಾರವಾಡ ಪೀಠ W.P No. 109397/2019, 109626/2019, 110116-144/2019 ರ ಆದೇಶ ದಿನಾಂಕ 15-05-2019 ರ ಮಧ್ಯಂತರ ಆದೇಶದನ್ವಯ ಟಿಪ್ಪು ಶಾಹೀದ್ ಅನುದಾನಿತ ಪಾಲಿಟೆಕ್ನಿಕ್, ಹುಬ್ಬಳ್ಳಿ ಸಂಸ್ಥೆಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
4. ವೇತನ ಬಿಲ್ಲಿನಲ್ಲಿ ಆಯುಕ್ತರ ಅನುಮೋದನೆ ಪಡೆಯದೇ ವೇತನವಲ್ಲದೇ ಯಾವುದೇ ಮೊತ್ತವನ್ನು ಕ್ಲೇಮ್ ಮಾಡಬಾರದು, ಮಾಡಿದ್ದಲ್ಲಿ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
5. ಸರ್ಕಾರದಿಂದ ಅನುಮೋದನೆಗೊಂಡಿರುವ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವೇತನಾನುದಾನವನ್ನು ಪಡೆಯುವುದು.
6. ಯಾವುದೇ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದಲ್ಲಿ ಕೂಡಲೇ ಆಯುಕ್ತರ ಗಮನಕ್ಕೆ ತರುವುದು.
7. ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದುಕಂಡು ಬಂದಲ್ಲಿ ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
8. ಹೆಚ್.ಆರ್.ಎಂ.ಎಸ್ ಬಿಲ್ ಅನ್ನು ಪ್ರತಿ ತಿಂಗಳು 25 ನೇ ತಾರೀಖಿನ್ನೊಳಗೆ ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿಗೆ ತಪ್ಪದೇ ಕಳುಹಿಸುವುದು, ಬಿಲ್ ತಡವಾಗಿಸಲ್ಲಿಸಿ ವೇತನ ಬಿಡುಗಡೆ ಮಾಡಲು ತಡವಾದಲ್ಲಿ ಪ್ರಿನ್ಸಿಪಾಲರನ್ನೇ ಹೊಣೆ ಮಾಡಲಾಗುವುದು.
9. ಪ್ರತಿ ತಿಂಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸುವುದು. ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸದೇ ಇರುವ ಸಂಸ್ಥೆಗಳ ವೇತನವನ್ನು ತಾತ್ಕಾಲಿಕವಾಗಿ ತಡೆಹಿಡಿದಲ್ಲಿ ಪ್ರಿನ್ಸಿಪಾಲರುಗಳೇ ನೇರ ಹೊಣೆಗಾರರಾಗುತ್ತಾರೆ.
10. ಪ್ರತಿ ತಿಂಗಳು ಶಾಸನ ಬದ್ಧ ಕಟಾವುಗಳನ್ನು ಮಾಡಿ ಆಯಾ/ಸಂಬಂಧಪಟ್ಟ ಇಲಾಖೆಗಳಿಗೆ ತಪ್ಪದ ಕಡ್ಡಾಯವಾಗಿ ಕಳುಹಿಸಿ ಈ ಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.
11. ಪ್ರತಿ ಆರ್ಥಿಕ ವರ್ಷದಕೊನೆಯಲ್ಲಿ "Annual Accounts "ಅನ್ನು ಸಲ್ಲಿಸುವುದು.
12. ವಿದ್ಯಾರ್ಥಿ ಬೋಧನಾ ಶುಲ್ಕವನ್ನು ನಿಗಧಿತ ಸಮಯದಲ್ಲಿ ಪಾವತಿಸುವುದು.

**'ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಆಯುಕ್ತಾಲಯದ ಬಿಎಲ್‌ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪಟ್ಟಿಯಲ್ಲಿ ಸೂಚಿಸಿರುವ ಅನುದಾನಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ(ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ಬಿಲ್ಸ್ ವಿಭಾಗಕ್ಕೆ (ಉ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.